ಮಧ್ವೇಶಕೃಷ್ಣಾಂಕಿತ ದಾಸಾರ್ಯ

ವಿರಚಿತ

ಚ್ಯವನ ಋಷಿ - ಸುಕನ್ಯ ಚರಿತ್ರೆ

ಸಂಪಾದಕ : ಅರವಿಂದಲೋಚನ

ಚ್ಯವನ ಋಷಿ-ಸುಕನ್ಯ ಚರಿತ್ರೆ

(ಕನ್ನಡ ಭಾಷೆಯಲ್ಲಿ ಹಾಡು)

ಸಂಪಾದಕ : ಅರವಿಂದಲೋಚನ

Rarest Archiver

ಗತಶಾಲಿವಾಹನಶಕ ೧೯೪೨ ಚಾಂದ್ರಮಾನ

ಶಾರ್ವರೀ ನಾಮ ಸಂವತ್ಸರದ

ಹೇಮಂತಋತುವಿನ

ಮಾರ್ಗಶೀರ್ಷ ಮಾಸದ

ಕೃಷ್ಣ ಪಕ್ಷದ ಷಷ್ಠಿ ತಿಥಿಯಂದು ಈ ಗ್ರಂಥವು ಪ್ರಕಟ

Rarest Archiver

ಚ್ಯವನ ಋಷಿ-ಸುಕನ್ಯ ಚರಿತ್ರೆ

ರಾಗ : ಆನಂದಭೈರವಿ

ತಾಳ : ಮಿಶ್ರಛಾಪು

ಹಿಂದಕ್ಕೊಬ್ಬ ಅರಸು ಶರಿಯಾತಿ ರಾಜನು
ಸಂಭ್ರಮದಿ ರಾಜ್ಯವಾಳುತಿದ್ದ|
ನಂದಿನಿ ಸುಕನ್ಯಳೆಂಬ ಕನ್ನಿಕೆ ಪಡೆದು
ಸಂತಸದಲಿತ್ತ ಆಳುತಿದ್ದ ||೧||

ದಿನದಿನ ಬೆಳೆದಳು ಚಂದ್ರನಂತೆ
ಕನಕ ಪ್ರತಿಮೆರೂಪ ತಾಳಿದಳು|
ನವ ಯವ್ವನವತಿ ನಯ ವಿನಯದಲಿ
ದಿನಕರನಂತೆಬೆಳಗಿದಳು ||೨||

Rarest Archiver

ಒಂದು ದಿನದಿ ರಾಜ ಬೇಟೆಗೆನುತಲಿ
ಮಗಳ ಕರಕೊಂಡು ಹೊರಟನಾಗ|
ವಿಧವಿಧ ಪಕ್ಷಿ ಮೃಗಗಳ ನೋಡುತ
ಹೊರಟರು ತಾವು ವನದಲ್ಲಾಗ||೩||

ಗಿಡಗಳ ನೋಡುತ ಎಲೆಗಳ ಕಿತ್ತುತ
ಹಾವಿನ ಹುತ್ತೊಂದ ಕಂಡಳಾಗ|
ಮಿಣಿ ಮಿಣಿ ಮಿಂಚುವ ಬೆಳಕನ್ನೆ ಕಂಡಳು
ಹುತ್ತಿನ ಮಧ್ಯ ನೋಡಿದಳು||೪||

ಆತುರದಿಂದಲಿ ಏನಿರಬಹುದೆಂದು
ಕೆಳಗಿದ್ದ ಕಡ್ಡಿಯ ತೆಗೆದುಕೊಂಡು|
ಬಲಗೈಲಿ ಹಿಡಿದು ಬೆಳಕನ್ನೆ ನೋಡುತ
ಕಡ್ಡಿಯಿಂದಲಿ ತಾ ಚುಚ್ಚಿದಳು||೫||

Rarest Archiver

ಕಡ್ಡಿಯ ಚುಚ್ಚುತ ನೋಡುತಲಿರಲು
ಸರಸರ ಹರಿಯಿತು ರಕ್ತಧಾರೆ|
ಬಲು ಭಯದಿಂದಲಿ ನೋಡುತ್ತ ನಿಂತಳು
ಇದು ಏನು ಸೋಜಿಗ ಎಂದುಕೊಂಡು||೬||

ರಕ್ತವು ಸುರಿಯಿತು ಮಲಮೂತ್ರ ಕಟ್ಟಿತು
ಬಂದ ಸೈನಿಕರ ಗುಂಪಿಗೆಲ್ಲ|
ತಪ್ಪೇನು ಮಾಡಿದಿರೆಂದು ನುಡಿಯಲು
ಒಪ್ಪಿಕೊಂಡಳು ಮಗಳು ತನ್ನ ತಪ್ಪ||೭||

ಹತ್ತಿರ ಬಂದನು ಹುತ್ತನೆ ನೋಡುತ
ರಾಜನು ನುಡಿದನು ಅರ್ಥಿಯಿಂದ|
ಹೊಟ್ಟೆಯ ಉಬ್ಬರ ನಿಲ್ಲುವಂತಾದರೆ
ಕೊಟ್ಟೇನು ಮಗಳ ನಿಷ್ಠೆಯಿಂದ||೮||

Rarest Archiver

ಹುತ್ತು ವಡೆದುಕೊಂಡು ನಿಂತನು
ಋಷಿತಾನು ಗಟ್ಯಾಗಿರಾಜಗೆ ಹೇಳುತಲಿ|
ವರದಕ್ಷಿಣೆ ವರ ಉಪಚಾರ ಸಹಿತಾಗಿ
ಮಗಳನ್ನ ಎನಗೆ ಕೊಡು ಎಂದನು||೯||

ನಡುಗುವ ದೇಹವು ನಡುಗುವ ಶಿರದಲಿ
ಬಿಳಿಹುಬ್ಬು ಕಣ್ಣು ಮುಚ್ಚಿರಲು|
ಕಿವಿಯು ಕೇಳದಂತೆ ನಿಂತ ಚವನ ಋಷಿಗಳಿಗೆ
ಮಗಳ ಧಾರೆ ಎರೆದು ಕೊಟ್ಟ ರಾಜ||೧೦||

ಮಲಮೂತ್ರ ನಿಂತವು ಸ್ಥಿರವಾಗಿ
ನಡೆದರು ಮಗಳನ ಬಿಟ್ಟು ನಡೆದ ರಾಜ|
ಪತಿಸೇವೆ ಮಾಡುತ ಹಿತದಿಂದ ಇದ್ದಳು
ಮತಿವಂತೆ ಸುಕನ್ಯ ಅತಿಶಯದಿ||೧೧||

Rarest Archiver

ಒಂದು ದಿನ ಬಂದರಲ್ಲಿಗೆ ಅಶ್ವಿನಿ
ದೇವತೆಗಳು ಮನೆಗೆ ಚಿಕ್ಕ|
ವಯಸ್ಸಿನ ಪ್ರಾಯ ಮಾಡಬೇಕಂತ
ಕೇಳಿದಳು ತಾ ಭಕ್ತಿಯಿಂದ||೧೨||

ಯಜ್ಞದಲ್ಲಿ ಭಾಗವು ಕೊಡುವುದೆಂತಾದರೆ ತಕ್ಕ
ಪ್ರಾಯವು ಬರುವುದು ಎನ್ನುತ |
ನದಿಯಲ್ಲಿ ಮಿಂದರು ಒಂದೇ ರೂಪದಲಿ
ಬಂದು ನಿಂತರು ತಾವು ಎದುರಾಗಾಗ||೧೩||

ಬಗ್ಗಿ ವಂದಿಸುತ ತಲೆ ತಗ್ಗಿಸಿ ನಿಂತಳು
ಹಿಗ್ಗುತ ಮನದಲ್ಲಿ ಸುಕನ್ಯ ತಾನು|
ತನ್ನ ಗಂಡನ ಗುರುತು ತಿಳಿಸಿ ಹೊರಟರು
ದೇವತೆಗಳು ಹರಸುತ||೧೪||

Rarest Archiver

ಅನುದಿನಸುಖದಿಂದ ಕಳೆದರು
ದಿನಗಳ ಪತಿವ್ರತಧರ್ಮ ಪಾಲಿಸುತ|
ವನಕಾಗೆ ಬಂದನು ರಾಜನು ತಾನು ಮಗಳನ
ಕಂಡು ಆಶ್ಚರ್ಯದಿಂದ||೧೫||

ಮುದಿಗಂಡನಾ ಕೊಂದು ಬದುಕಿದ್ಯಾಮಗಳೆ ಚಿಕ್ಕ
ಗಂಡನ ಕೂಡ ಸರಸವಾಡಿ|
ಹಿಂದಕ್ಕೆ ನಡೆದನು ಮಗಳ ಸರಿ ಮಾತಾಡದೆ
ಕೋಪದಿಂದಲಿ ಹೊರಟರಾಜ||೧೬||

ನಗುತ ಬಂದಳು ತಾನು ಚರಣಕ್ಕೆರಗುತಲಿ ತಿಳಿಯ
ಬ್ಯಾಡವೊ ತಪ್ಪು ತಂದೆ ನೀನು|
ಅಶ್ವಿನಿ ದೇವತೆಗಳುಬಂದೆನ್ನಪತಿಗೆ ಚಿಕ್ಕ ಪ್ರಾಯವ
ಮಾಡಿ ಕೊಟ್ಟರೆಂದು||೧೭||

Rarest Archiver

ಯಾಗವ ಮಾಡಿ ಭಾಗವ ಕೊಡುವೋದು
ನೇಮದಿಬೇಡಿಕೊಂಡಿಹೆವು ನಾವು|
ನೋಡುತ ನಗುತ ಮಾತಾಡುತ
ರಾಜನು ಪ್ರೇಮದಿ ನಡೆದ ತನ್ನಾ ಪುರಕೆ||೧೮||

ಕನ್ನಿಕೆಯಾದ ಸುಕನ್ಯಳ ಕಥೆಯನ್ನು
ಇನ್ನು ಭಕ್ತಿಯಿಂದ ಕೇಳಿದರೆ|
ಧನ್ಯರಾಗುವರು **ಮಧ್ವೇಶಕೃಷ್ಣನ** ದಯದಿ
ಮಾನ್ಯರಾಗುವರು ಭೂತಳದಿ||೧೯||

||ಶ್ರೀ ಕೃಷ್ಣಾರ್ಪಣಮಸ್ತು||

||ಶ್ರೀ ಮಧ್ವೇಶಾರ್ಪಣಮಸ್ತು||

Rarest Archiver

Rarest Archiver